# ಮಾಸ ಭವಿಷ್ಯ

-ಅರುಣ ಪಿ. ಭಟ್



**ಮೇಷ:** ನಿಮ್ಮ ವೃತ್ತಿಜೀವನದಲ್ಲಿ ನೀವು ಅಡೆತಡೆಗಳನ್ನು ಎದುರಿಸಬೇಕಾಗಬಹುದು. ಉತ್ತಮ ಫಲಿತಾಂಶ ಪಡೆಯಲು ನೀವು ಕಠಿಣ ಪರಿಶ್ರಮ ಪಡಬೇಕಾಗಬಹುದು. ಈ ತಿಂಗಳು ನಿಮ್ಮ ಆದಾಯವು ಹೆಚ್ಚಾಗಬಹುದು ಮತ್ತು ನಿಮ್ಮ ಖರ್ಚುಗಳು ಹೆಚ್ಚಾಗಬಹುದು. ಶುಭ: 12,18,29 ಅಶುಭ: 9,13,27

**ವೃಷಭ:** ಕಲಾವಿದರಿಗೆ ಸಂಗೀತಗಾರರಿಗೆ ಉತ್ತಮ ಸಮಯ. ಉತ್ತಮ ಅವಕಾಶ ಬರುವುದು. ಸರಕಾರಿ ಕೆಲಸಗಳಲ್ಲಿ ಯಶಸ್ಸು. ಗೃಹ ನಿರ್ಮಾಣ ಅಥವಾ ನೂತನ ಮನೆ ಕೊಳ್ಳುವ ಯೋಗವಿದೆ. ಬರತಕ್ಕ ಸಾಲದ ಬಾಕಿ ಹಣ ಬರುವುದು. ಅವಿವಾಹಿತರಿಗೆ ವಿವಾಹದ ಸೂಚನೆ. ಶುಭ: 14,22,26.ಅಶುಭ: 8,12,23





**ಮಿಥುನ:** ವ್ಯಾಪಾರ–ವಹಿವಾಟು ಚೆನ್ನಾಗಿ ನಡೆಯುತ್ತದೆ. ಸರ್ಕಾರಿ ಉದ್ಯೋಗಿಗಳಿಗೆ ಮೇಲಧಿಕಾರಿಗಳಿಂದ ಒತ್ತಡ. ಅನಗತ್ಯ ಅಲೆದಾಟ ಜಾಸ್ತಿ ಬರುತ್ತದೆ. ವಾಹನ ಖರೀದಿ ಯೋಗವಿದೆ. ಆರೋಗ್ಯದ ಬಗ್ಗೆ ಕಾಳಜಿ ಇರಲಿ. ಆರ್ಥಿಕ ಸ್ಥಿತಿ ಉತ್ತಮವಾಗಿರುತ್ತದೆ. ಶುಭ: 11,15,21 ಅಶುಭ: 12,16,29

**ಕರ್ಕ:** ನೆರೆಹೊರೆಯವರಿಂದ ಉತ್ತಮ ಸಹಕಾರ ಸ್ನೇಹಮಯ ವಾತಾವರಣ ಇರುತ್ತದೆ. ಮನೆಯಲ್ಲಿ ಮಂಗಳ ಕಾರ್ಯ ನಡೆಸುವಿರಿ. ಆರ್ಥಿಕವಾಗಿ ಉತ್ತಮ ತಿಂಗಳು. ರಾಜಕೀಯದಲ್ಲಿರುವವರಿಗೆ ಉತ್ತಮ ಫಲಿತಾಂಶ. ವಾಣಿಜ್ಯ ಮತ್ತು ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಶುಭ. ಶುಭ: 14,18,26 ಅಶುಭ: 12,19,22





**ಸಿಂಹ:** ಹತ್ತಿರದ ಬಂಧುಗಳಿಗೆ ನಿಮ್ಮ ಸಹಾಯದ ಅವಶ್ಯಕತೆ ಬರುವುದು. ಉದ್ಯೋಗದಲ್ಲಿ ಮೇಲಧಿಕಾರಿಗಳ ತೊಂದರೆ, ಅನವಶ್ಯಕ ಕಿರಿಕಿರಿ ಇರುವುದು. ಅವಿವಾಹಿತರಿಗೆ ವಿವಾಹ ಭಾಗ್ಯ. ವಾಹನ ಖರೀದಿಗೆ ಉತ್ತಮ ಅವಕಾಶ ಸಿಗುತ್ತದೆ. ತಿಂಗಳ ಕೊನೆಯಲ್ಲಿ ಸಣ್ಣ ಪ್ರವಾಸ. ಶುಭ: 14,18,22 ಅಶುಭ: 16,23,28

**ಕನ್ಯಾ:** ವಿದ್ಯಾರ್ಥಿಗಳಿಗೆ ಉತ್ತಮ ಶೈಕ್ಷಣಿಕ ಪ್ರಗತಿ. ನಿಮ್ಮ ಆರೋಗ್ಯವು ಉತ್ತಮವಾಗಿ ಇರುತ್ತದೆ. ಹೆಚ್ಚು ಉತ್ಸಾಹ ಹಾಗೂ ಸಂತೋಷದಿಂದ ಕಾಣಿಸಿಕೊಳ್ಳುತ್ತೀರಿ. ತಿಂಗಳ ಕೊನೆಗೆ ವ್ಯಾಪಾರ– ವ್ಯವಹಾರ ಲಾಭದಾಯಕವಾಗಿ ಇರುತ್ತದೆ. ಶುಭ: 16,20,28 ಅಶುಭ: 13,23,26





**ತುಲಾ:** ವ್ಯಾಪಾರ ವ್ಯವಹಾರಸ್ಥರಿಗೆ ಉತ್ತಮ ಲಾಭ. ನಿರುದ್ಯೋಗಿಗಳಿಗೆ ಉದ್ಯೋಗ ಸಿಗುವ ಸಾಧ್ಯತೆ. ಸಂತತಿ ಇಲ್ಲದವರಿಗೆ ಸಂತತಿಯ ಸೂಚನೆ. ವಿವಾಹಾಪೇಕ್ಷಿಗಳಿಗೆ ಸಂಗಾತಿ ಲಭ್ಯ. ಕುಟುಂಬ ಸೌಖ್ಯ. ಒಟ್ಟಾರೆಯಾಗಿ ಶುಭವಾಗಲಿದೆ ಶುಭ: 12,14,28 ಅಶುಭ: 13,19,27

**ವೃಶ್ಚಿಕ:** ಈಗ ಮಾಡುತ್ತಿರುವುದಕ್ಕಿಂತ ಉತ್ತಮವಾಗಿ ಕೆಲಸ ಮಾಡಲು ಪ್ರಯತ್ನಿಸುತ್ತೀರಿ. ಹಲವು ಸವಾಲುಗಳು ಏಕಕಾಲಕ್ಕೆ ಎದುರಾಗುತ್ತದೆ. ಆರೋಗ್ಯ ಸಮಸ್ಯೆಗಳು ಎದುರಾಗಬಹುದು. ಹಣಕಾಸಿನ ವೆಚ್ಚ ಹೆಚ್ಚಾಗಲಿದೆ. ಶುಭ: 10,14,22 ಅಶುಭ: 12,16,23





**ಧನು:** ಗುರು– ಹಿರಿಯರ ಆಶೀರ್ವಾದ ಪಡೆದು ಮಹತ್ವದ ನಿರ್ಣಯ ತೆಗೆದುಕೊಳ್ಳಿ. ಆರೋಗ್ಯದಲ್ಲಿ ಸ್ವಲ್ಪಮಟ್ಟಿಗೆ ಕಿರಿಕಿರಿ. ಹಳೆಯ ಕಾನೂನು ಪ್ರಕರಣಗಳು ಇದ್ದಲ್ಲಿ ಪರಿಹಾರವಾಗುತ್ತದೆ. ಕುಟುಂಬ ಸಮೇತ ಚಿಕ್ಕ ಪ್ರವಾಸವೊಂದನ್ನು ಮಾಡುವಿರಿ. ಶುಭ: 12,19,28 ಅಶುಭ: 10,16,24

**ಮಕರ:** ಆರ್ಥಿಕವಾಗಿ ಸುಭದ್ರವಾಗುವಿರಿ. ಹಳೇಸಾಲ ತೀರಿಸುವಿರಿ. ನಿಮ್ಮ ವಿರೋಧಿಗಳ ಆಟ ನಿಮ್ಮ ಮುಂದೆ ನಡೆಯದು. ಪಿತ್ರಾರ್ಜಿತ ಆಸ್ತಿಗೆ ಸಂಬಂಧಪಟ್ಟ ವಿವಾದಗಳು ಇದ್ದಲ್ಲಿ ಇತ್ಯರ್ಥ. ವಾಹನ ಚಲಾಯಿಸುವಾಗ ಜಾಗರೂಕತೆ ವಹಿಸಿ. ವಿದ್ಯಾರ್ಥಿಗಳಿಗೆ ಉತ್ತಮ ಯಶಸ್ಸು. ಶುಭ: 16,23,26 ಅಶುಭ: 14,18,22





**ಕುಂಭ:** ಅಸ್ಥಿರವಾದ ಮನಸ್ಸಿಂದ ಗೊಂದಲವಾಗುವುದು. ಸಜ್ಜನರ ಸಹವಾಸ ಆಧ್ಯಾತ್ಮಿಕ ಚಿಂತನೆಯ ಅವಶ್ಯಕತೆ ಇದೆ. ಸರ್ಕಾರಿ ನ್ಯಾಯಾಲಯದ ಕಾರ್ಯಗಳಲ್ಲಿ ಅಡೆತಡೆ ಉಂಟಾಗುವುದು. ನಂಬಿದ ಜನರು ನಂಬಿಕೆ ಕಳೆದುಕೊಳ್ಳುವರು. ಶುಭ: 16,24,28 ಅಶುಭ: 17,18,27

**ಮೀನ:** ಪ್ರೀತಿಪಾತ್ರರೊಂದಿಗೆ ಉತ್ತಮ ಸಮಯವನ್ನು ಕಳೆಯಲಿದ್ದೀರಿ. ಸೋದರ ಸೋದರಿಯರ ಜತೆಗೆ ಬಾಂಧವ್ಯ ಗಟ್ಟಿಯಾಗಲಿದೆ. ಹೆಸರಾಂತ ಸಂಸ್ಥೆಯೊಂದರಲ್ಲಿ ಉದ್ಯೋಗ ದೊರೆಯುವ ಅವಕಾಶ ಇದೆ. ಪದೋನ್ನತಿ ಯೋಗ ಇದೆ. ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಶುಭ: 18,25,29 ಅಶುಭ: 12,16,26

